**ಓ.ಎಸ್. ನಂಃ 134/2019**

**ಪಿ.ಡಬ್ಲ್ಯೂಃ 1**

**ದಿನಾಂಕ 18.02.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಕೆ.ಎಸ್.ಡಿ. ವಕೀಲರಿಂದಃ</u>**

1. ನನ್ನ ತಂದೆಯಾದ 1 ನೇ ಪ್ರತಿವಾದಿಗೆ 2 ಜನ ಹೆಂಡತಿಯಂದಿರು ಇರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಮೊದಲನೇಯ ಹೆಂಡತಿ ಹೆಸರು ಸಿದ್ದಮ್ಮ @ ಅಮ್ಮಮ್ಮ ಅಂತ ಇದ್ದು, ಅವರು ನನ್ನ ತಾಯಿ ಎಂದರೆ ಸರಿ. 1 ನೇ ಪ್ರತಿವಾದಿಯ ಎರಡನೇಯ ಹೆಂಡತಿ ಹೆಸರು ಮಾಲಮ್ಮ @ ಪುಟ್ಟಮಾಲಮ್ಮ ಎಂದರೆ ಸರಿ. ನಾನು 2 ವರ್ಷದ ಮಗು ಆಗಿದ್ದಾಗ ಹಾಗೂ 6 ನೇ ಪ್ರತಿವಾದಿ 2 ತಿಂಗಳ ಮಗುವಾಗಿದ್ದಾಗ ನನ್ನ ತಾಯಿಯಾದ ಸಿದ್ದಮ್ಮ @ ಅಮ್ಮಮ್ಮರವರು ಮೃತಪಟ್ಟಿರುತ್ತಾರೆ ಎಂದರೆ ಸರಿ.

2. ನನ್ನ ತಾಯಿ ಮರಣ ಹೊಂದಿದ ಬಳಿಕ 1 ನೇ ಪ್ರತಿವಾದಿಯು 3 ನೇ ಪ್ರತಿವಾದಿಯಾದ ಮಾಲಮ್ಮ @ ಪುಟ್ಟಮಾಲಮ್ಮರವರನ್ನು 2 ನೇ ವಿವಾಹವಾಗಿರುತ್ತಾರೆ ಎಂದರೆ ಸರಿ. ನಾನು ಮತ್ತು 6 ನೇ ಪ್ರತಿವಾದಿ ಚಿಕ್ಕವರಿದ್ದಾಗ ನಮ್ಮ ತಾಯಿ ಮರಣ ಹೊಂದಿದ ಕಾರಣ ನನ್ನನ್ನು ಮತ್ತು 6 ನೇ ಪ್ರತಿವಾದಿಯನ್ನು 3 ನೇ ಪ್ರತಿವಾದಿಯೇ ಸಾಕಿ ಸಲುಹಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಕೇವಲ ಪುಟ್ಟೇಗೌಡ ಎನ್ನುವ ಒಂದೇ ಹೆಸರಿದೆ ಎಂದರೆ ಸರಿ. ನನ್ನ ತಂದೆಯಾದ 1 ನೇ ಪ್ರತಿವಾದಿಯು ಈಗಾಗಲೇ ಮರಣ ಹೊಂದಿ 4 ವರ್ಷಗಳಾಗಿವೆ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**

**ನ್ಯಾಯಾಧೀಶರು, ಕೆ.ಆರ್.ನಗರ.**